

ಈಶ್ವರ ಬಡಿಗೇರ

# ಇದ್ದಂಗ ಇರೂದಿಲ್ಲ ಏಜು-ಕ್ರೇಜು

ದೇಹಕ್ಕೇನೋ ಪ್ರಕೃತಿಸಹಜವಾಗಿ ವಯಸ್ಸಾಗುತ್ತದೆ. ಆದರೆ, ಮನಸ್ಸಿನ ಕಥೆ? ದೇಹದ ವಯಸ್ಸನ್ನು ಒಪ್ಪಿಕೊಳ್ಳಲು ಮನಸ್ಸು ನಿರಾಕರಿಸುತ್ತದೆ. ಬಿಳಿಕೂದಲಿನ ಸಂಗತಿಯನ್ನೇ ನೋಡಿ. ಕೂದಲು ಬೆಳ್ಳಗಾಗುವುದನ್ನು ಒಪ್ಪಿಕೊಳ್ಳಲು ಮನಸ್ಸಿಗೆ ನೂರೆಂಟು ತಕರಾರು. ಅಂಥ ಸಂದರ್ಭದಲ್ಲೇ ನೆನಪಾಗುವುದು – 'ಇದ್ದಂಗ ಇರೂದಿಲ್ಲ... ಜೀವನದಾಗ ಯಾವ್ದೂ ಇದ್ದಂಗಿರೂದಿಲ್ಲ' ಎನ್ನುವ ಮಾತು.

■ ಗುರು ಪಿ.ಎಸ್.

'ಏನ್ ಪುಟ್ಟ, ಯಾವ ಸ್ಕೂಲು, ಎಷ್ಟನೇ ಕ್ಲಾಸ್‌ನಲ್ಲಿ ಓದ್ತಿದಿಯಾ' ಕಾಲೆಳೆಯುವುದನ್ನೇ ಪರಮ ಉದ್ದೇಶವಾಗಿಟ್ಟುಕೊಂಡು ಅಂಗಡಿಯವನನ್ನ ಪ್ರಶ್ನಿಸಿದೆ. 'ನಂಗೆ ಸ್ಕೂಲ್‌ಗೆ ಹೋಗೋ ಮಗ ಇದ್ದಾನೆ. ನಾನು ಯಾವ ಸ್ಕೂಲ್‌ಗೆ ಹೋಗ್ಲಿ' ನಗುತ್ತಾ ಹೇಳ್ದ ಆ ವ್ಯಕ್ತಿ. 'ಹಾಗಲ್ಲ, ನಂಗೆ ಅಂಕಲ್ ಅಂದ್ರಲ್ಲ, ಅದಕ್ಕೆ ಯಾವುದಾದರೂ ಸ್ಕೂಲ್‌ನಲ್ಲಿ ಇನ್ನೂ ನೀವು ಓದ್ತಿರಬಹುದು' ಅಂತಾ ಕೇಳ್ದೆ ಅಂದೆ. ನಗುತ್ತಿದ್ದ ಮುಖ ಕಪ್ಪಿಟ್ಟಿತು. ಅಂಕಲ್ ಅಂದಿದ್ದಕ್ಕೆ ಸರಿಯಾಗೇ ತಿರುಗೇಟು ಕೊಟ್ಟೆ ಎಂಬ ಖುಷಿಯಲ್ಲಿ ಮನೆಯತ್ತ ಹೆಜ್ಜೆ ಹಾಕಿದೆ.

'ಹೇರ್ ಕಲರ್‌ನ ಆರು ಪಾಕೆಟ್ ತರೋಕೆ ಹೇಳಿದ್ದೆ. ಅದನ್ನೇ ಬಿಟ್ಟು ಬಂದಿದೀರಲ್ರೀ' ಬ್ಯಾಗು ಪರೀಕ್ಷಿಸುತ್ತಾ ಬೈಯತೊಡಗಿದರು ಹೆಂಡ್ತಿ. 'ತಲೆಗೆ ಹಾಕೋ ಬಣ್ಣದ್ದು ಆರಾರು ಪಾಕೆಟ್ ಬರೀತಾರಾ.. ಲಿಸ್ಟ್‌ನಲ್ಲಿ ಅದನ್ನ ನೋಡಿಯೇ ಆ ಅಂಗಡಿಯವನು ನನ್ನನ್ನ ಅಂಕಲ್ ಅಂತಾ ಕರೆದ ಅನ್ಸುತ್ತೆ' ಸಿಡಿಮಿಡಿಯಲ್ಲಿ ಹೇಳ್ದೆ. 'ಕನ್ನಡಿಯಲ್ಲಿ ಮುಖ ನೋಡ್ಕೊಳಿ... ಹಾಗೇ, ಮೊಬೈಲ್‌ನಲ್ಲೇ ಕಣ್ಣು ನೆಡೋದು ಬಿಟ್ಟು, ಮನೆ ಮಂದಿ ಮುಖಾನೂ ಸ್ವಲ್ಪ ನೋಡಿ' ಎಂದು ಅಡುಗೆಮನೆ ಸೇರಿದರು ಪತ್ನಿ.

ಕನ್ನಡಿ ಎದುರು ನಿಂತೆ. ಬೆಳ್ಳಿ ಕೂದಲು ಫಳಫಳ ಹೊಳೆಯುತ್ತಿದ್ದವು. ಅಮ್ಮನಿಗೆ ವಯೋಸಹಜವಾಗಿ ನೆರೆ ಕಾಣಿಸಿಕೊಂಡಿತ್ತು. ಹೋಂ ಮಿನಿಸ್ಟರ್ ತಲೆಯ ಮೇಲೆ ಕೂಡ ಕಪ್ಪು–ಬಿಳುಪಿನ ಗೆರೆಗಳು ರಾರಾಜಿಸುತ್ತಿದ್ದವು. 'ಅಪ್ಪಾ, ಅಪ್ಪಾ, ನೋಡಿಲ್ಲಿ... ನನ್ನ ತಲೇಲೂ ಒಂದು ಬಿಳಿಕೂದಲು' ನಾಲ್ಕನೇ ಕ್ಲಾಸ್‌ನ ಮಗಳು ಓಡಿ ಬಂದಿದ್ದು ನೋಡಿ ಸಮಾಧಾನ–ಬೇಸರ ಎರಡೂ ಒಟ್ಟೊಟ್ಟಿಗೇ ಆಯ್ತು. ಮಗಳಿಗೂ ವೈಟ್ ಕೂದಲು ಬಂದಿರೋದ್ರಿಂದ ನನಗೆ ಬಂದಿರೋದು ದೊಡ್ಡ ವಿಷಯವೇನಲ್ಲ ಎಂಬ ಸಮಾಧಾನ. ಮಗಳಿಗೆ ಬಾಲನೆರೆ ಕಾಣಿಸಿಕೊಂಡಿತಲ್ಲ ಎಂಬ ಬೇಸರ.

***

ಫೇಸ್‌ಬುಕ್ ನೋಡುತ್ತಿದ್ದಾಗ ನೋಟಿಫಿಕೇಷನ್ ಬಂತು. ಗೆಳತಿಯ ಬರ್ತ್‌ಡೇ. ಎಷ್ಟು ಆಗಿರಬಹುದು ನೋಡೋಣ ಎಂದರೆ ಹುಟ್ಟಿದ ದಿನಾಂಕ ಮತ್ತು ತಿಂಗಳು ಮಾತ್ರ ಇತ್ತು. ಆದ್ರೆ ವರ್ಷ ಹಾಕಿಲ್ಲ ! 'ನಲವತ್ತು ವರ್ಷ ಆಯ್ತಾ.. ಫೇಸ್‌ಬುಕ್‌ನಲ್ಲಿ ಹುಟ್ಟಿದ ವರ್ಷಾನೇ ಹಾಕಿಲ್ಲ' ಮೆಸೆಂಜರ್‌ನಲ್ಲಿ ಕಿಚಾಯಿಸಿದೆ. 'ಜಗತ್ತಿಗೆಲ್ಲ ಗೊತ್ತಾಗಬೇಕಾ... ನಂಗೆ ಎಷ್ಟು ವರ್ಷವಾಯ್ತು ಅಂತಾ. ಟಿಕ್‌ಟಾಕ್‌ನಲ್ಲಿ ಡಬ್‌ಸ್ಮ್ಯಾಶ್ ಮಾಡಿ, ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಿದೆ ಅಂದ್ರೆ ಎಷ್ಟು ವೀವ್ಸ್ ಸಿಗುತ್ತೆ ಗೊತ್ತಾ... ಸಾವಿರಾರು ಅಭಿಮಾನಿಗಳಿದ್ದಾರೆ. ಅವರಿಗೆಲ್ಲ ನನ್ನ ಏಜ್ ಗೊತ್ತಾದರೆ ಡಿಸಪಾಯಿಂಟ್ ಆಗಿಬಿಡ್ತಾರೆ' ಉತ್ತರ ಕೊಟ್ಟಳು ಫ್ರೆಂಡ್. 'ಹುಟ್ಟಿದ ವರ್ಷದ ಜೊತೆಗೆ, ನಿನ್ನ ಫೋಟೊಗಳನ್ನೂ ಹೈಡ್ ಮಾಡಿ ಲಕ್ಷಾಂತರ ಕಣ್ಣುಗಳನ್ನು ಕಾಪಾಡು. ಇಲ್ಲ ಅಂದ್ರೆ, ಮೇಕಪ್ ಇಲ್ಲದೆ ಇರೋ ನಿನ್ನ ಫೋಟೊಗಳನ್ನು ಹಾಕಿ ಆ ಕಣ್ಣುಗಳನ್ನು ಸರ್ವನಾಶ ಮಾಡಿಬಿಡು' ಎಂದು ಕಳಿಸಿದೆ. ಮುಖ ಸಿಂಡರಿಸಿಕೊಂಡ ಎಮೋಜಿ ಬಂದು ಬಿತ್ತು.

'ಅಪ್ಪಾ, ಇನ್ನೆರಡು ತಿಂಗಳು ಕಳೆದ್ರೆ ನಾನು ಐದನೇ ಕ್ಲಾಸು ಗೊತ್ತಾ' ಓಡಿ ಬಂದ ಮಗಳು ಖುಷಿಯಿಂದ ಹುಬ್ಬೇರಿಸಿದಳು. ಮಕ್ಕಳಾಗಿದ್ದಾಗ ಒಂದೊಂದು